# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ,

# ನಂಜನಗೂಡು

**ಓ ಎಸ್ ನಂ.199-2013** **ಪಿ . ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಯೋಗೇಶ ಬಿ<br>ನಂಜನಗೂಡು |
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 23-08-2021. |

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಆರ್.ಎಂ.ಎಸ್ ವಕೀಲರಿಂದಃ**

ಈರಯ್ಯ ನನಗೆ ತಾತ ಆಗಬೇಕು. ಕೆಂಚಮ್ಮ ನನಗೆ ಅಜ್ಜಿಯಾಗಬೇಕು. ಈರಯ್ಯ ಮೃತಪಟ್ಟು ಈಗ್ಗೆ 20 ವರ್ಷಗಳಾಗಿವೆ. ಕೆಂಚಮ್ಮ ಮೃತಪಟ್ಟು ಈಗ್ಗೆ 22 ವರ್ಷಗಳಾಗಿವೆ. ಸದರಿ ಈರಯ್ಯ ಹಾಗೂ ಕೆಂಚಮ್ಮನಿಗೆ 5 ಜನ ಮಕ್ಕಳು. ಅಂದರೆ ಇಬ್ಬರು ಗಂಡುಮಕ್ಕಳು 4 ಜನ ಹೆಣ್ಣುಮಕ್ಕಳು ಅವರುಗಳೆಂದರೆ ಮಹದೇವಮ್ಮ, ಮರಮ್ಮ, ಸೌಭಾಗ್ಯ, ಮಾರಪ್ಪ ಮತ್ತು ಬಸವಣ್ಣ. ಸದರಿ ಮಾರಪ್ಪ ಮೃತಪಟ್ಟು ಈಗ್ಗೆ 15 ವರ್ಷಗಳಾಗಿವೆ. ಸದರಿ ಮಹದೇವಮ್ಮ ಮೈಸೂರಿನ ಅಶೋಕಪುರಂನಲ್ಲಿರುವ ಆಕೆಯ ಗೆಂಡ ಹೆಸರು ಗೊತ್ತಿಲ್ಲ, ವಿವಾಹವಾಗಿದ್ದು ಆಕ ಈಗ 15 ಹಿಂದೆ ಮೃಪಟ್ಟಿರುತ್ತಾಳೆ. ಸೌಭಾಗ್ಯ ಎಂಬುವವರು ಕುಪ್ಪರವಳ್ಳಿ ಗ್ರಾಮದವರನ್ನು ಮದುವೆಯಾಗಿ ಅವರು ಅಲ್ಲೇ ಇದ್ದಾರೆ. ಮರಮ್ಮ ಮುಡಹಳ್ಳಿ ಗ್ರಾಮದವರನ್ನು ಮದುವೆಯಾಗಿ ಅವರು ಸದರಿ ಗ್ರಾಮದಲ್ಲಿ ಇದ್ದಾರೆ. ಸದರಿ ಮಹದೇವಮ್ಮನಿಗೆ ಒಟ್ಟು 4 ಜನ ಮಕ್ಕಳು ಅವರುಗಳ ಹೆಸರು ಒಂದು ಭಾಗ್ಯಮ್ಮ ಇನ್ನುಳಿದವರ ಹೆಸರು ನನಗೆ ಗೊತ್ತಿಲ್ಲ. ಸದರಿ ಮರಮ್ಮನಿಗೆ ಒಟ್ಟು 4 ಜನ ಮಕ್ಕಳು ಅವರ ಪೈಕಿ ಇಬ್ಬರು ಮೃಪಟ್ಟಿದ್ದಾರೆ ಇನ್ನಿಬ್ಬರು ನಾಗೇಂದ್ರ ಹಾಗೂ ಮೀನಾಕ್ಷಿ ಇದ್ದಾರೆ. ಸದರಿ ಮಾರಪ್ಪನಿಗೆ ಒಂದು ಮಂಜುಳ ಎಂಬ ಹೆಣ್ಣು ಮಗಳಿದ್ದು ಆಕೆ ಮೈಸೂರಿಗೆ ವಿವಾಹವಾಗಿರುತ್ತಾರೆ ಹಾಗೂ 3 ಜನ ಗಂಡು ಮಕ್ಕಳು.

2. ನನ್ನ ತಂದೆ ಬಸವಣ್ಣನಿಗೆ ಒಟ್ಟು 3 ಜನ ಮಕ್ಕಳು, ನಾನು ಮೊದಲನೆಯವನು, ಎರಡನೇ ಯವರು ಸುಧಾರಾಣಿ ಹಾಗೂ ಕೊನಯದಾಗಿ ನನ್ನ ತಮ್ಮ ಮಹೇಶ. ನನ್ನ ತಾತ

ಮೃತಪಟ್ಟ ನಂತರ ನನ್ನ ತಂದೆ ಬಸವಣ್ಣ ಹಾಗೂ ನನ್ನ ದೊಡ್ಡಪ್ಪ ಮಾರಪ್ಪ ಆಸ್ತಿಗಳನ್ನು ವಿಭಾಗಮಾಡಿಕೊಂಡರು ಎಂದರೆ ಸರಿ.

(ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯಾವಕಾಶವನ್ನು ಕೋರಿದ್ದು ಸಮಯಾವಕಾಶವನ್ನು ನೀಡಲಾಯಿತು.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**